ಓ ಎಸ್ ನಂಃ 5/2015

ಪಿ.ಡಬ್ಲ್ಯೂ ಃ 1

ದಿನಾಂಕ 28-08-2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2, 3 ಮತ್ತು 6ನೇ ಪ್ರತಿವಾದಿ ಪರಃ ಶ್ರೀ ಬಿ ಆರ್ ವಕೀಲರಿಂದಃ

ನನ್ನ ಅಜ್ಜ ಸತ್ತಪ್ಪನವರಿಗೆ 4 ಜನ ಗಂಡು ಮಕ್ಕಳು. ಅವರುಗಳ ಪೈಕಿ ಮೊದಲನೆ ಓಬಳಪ್ಪರವರನ್ನು ಹೊರತು ಪಡಿಸಿ ಉಳಿದವರು ಮರಣ ಹೊಂದಿದ್ದಾರೆ ಎಂದರೆ ನಿಜ. ನನ್ನ ತಂದೆ ತಿಮ್ಮಪ್ಪ ಮರಣ ಹೊಂದಿ ಸುಮಾರು 20 ವರ್ಷಕ್ಕಿಂತ ಹೆಚ್ಚಾಗಿದೆ. ನನ್ನ ಚಿಕ್ಕಪ್ಪ ಸಗುನಪ್ಪನವರು ಮರಣ ಹೊಂದಿ ಸುಮಾರು 15 ವರ್ಷಗಳಾಗಿವೆ. ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಹನುಮಂತಪ್ಪ ಇಬ್ಬರು ಗಂಡು ಮಕ್ಕಳು ಮತ್ತು ನನ್ನ ತಂಗಿ ಜಯಮ್ಮ. ಸದರಿ ನನ್ನ ತಂಗಿಯಾದ ಜಯಮ್ಮನನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಾಯಿ ಮರಣ ಹೊಂದಿ ಒಂದು ತಿಂಗಳುಗಳಾಗಿದೆ. ಸದರಿ ದಾವೆಯನ್ನು ಹಾಕುವ ಕಾಲಕ್ಕೆ ನನ್ನ ತಾಯಿ ಬದುಕಿದ್ದರು ಎಂದರೆ ನಿಜ. ಅವರನ್ನು ಸಹ ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ನಿಜ.

ನಾನು ಮತ್ತು ನನ್ನ ಅಣ್ಣ ಕೃಷಿ ಮಾಡುತ್ತೇವೆ ಎಂದರೆ ಸರಿಯಲ್ಲ, ಕೂಲಿ ಕೆಲಸ ಮಾಡುತ್ತಿದ್ದೇವೆ. ಈ ಕೇಸು ಹಾಕುವ ಕಾಲಕ್ಕೆ ನಾವು ಕೃಷಿ ಮಾಡುತ್ತಿರುವುದಾಗಿ ನಮ್ಮ ವಕೀಲರಿಗೆ ಹೇಳಿದ್ದೇವು, ತದನಂತರ

ನಮಗೆ ಜಮೀನು ಕೊಡದೆ ಇದ್ದ ಕಾರಣ ಕೂಲಿ ಮಾಡುತ್ತಿದ್ದೇವೆ. ಕೇಸು ಹಾಕುವಾಗ ಎಲ್ಲಾರೂ ಒಟ್ಟಾಗಿ ಇದ್ದರಿಂದ ವ್ಯವಸಾಯ ಮಾಡುತ್ತಿದ್ದೆ. ಕೇಸು ಹಾಕುವ ಕಾಲಕ್ಕೆ ಸರ್ವೆ ನಂ.162, 163, 9/7, 9/4, 9/5, 4/20, 17/1, 4/25, 4/26, 4 ಪಿ98 ಈ ಎಲ್ಲಾ ಜಮೀನುಗಳಲ್ಲಿ ಕೃಷಿ ಮಾಡುತ್ತಿದ್ದೆ. ಸರ್ವೆ ನಂ. 9/4 ರಲ್ಲಿ 1 ಎಕರೆ 24 ಗುಂಟೆ, ಸರ್ವೆ ನಂ. 177 ರ 1 ¾ ಎಕರೆ, ಸರ್ವೆ ನಂ. 17/1 ರಲ್ಲಿ 4 ಎಕರೆ ವಿಸ್ತೀರ್ಣದಲ್ಲಿ ಮತ್ತು 4/25 ರಲ್ಲೂ ಎಲ್ಲಾರೂ ಸೇರಿ ಕೃಷಿ ಮಾಡುತ್ತಿದ್ದೇವು.

ನನ್ನ ತಂದೆ ಮರಣ ಹೊಂದಿದ ನಂತರ ನಾನು ಮತ್ತು ನನ್ನ ಅಣ್ಣ ಒಟ್ಟಾಗಿ ಇದ್ದೇವು. ನಮ್ಮ ಮನೆಯಲ್ಲಿ ಈಗ ನಾನು ಮತ್ತು ನನ್ನ ಅಣ್ಣ ಒಂದೇ ಮನೆಯಲ್ಲಿ ಒಟ್ಟಾಗಿ ಇದ್ದೇವೆ. ನಮ್ಮ ಊರಿನ ಬಸ್ ನಿಲ್ದಾಣದ ಬಳಿ ಇರುವ ದಸರಾ ಬಯಲು ಇಲ್ಲಿ ಇರುವ ಮನೆಯಲ್ಲಿ ವಾಸ ಇದ್ದೇನೆ ಎಂದರೆ ನಿಜ. ನನ್ನ ಅಣ್ಣ ಊರಿನ ಒಳಗೆ ಇರುವ ಕೆಂಪು ಹಂಚಿನ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಊರು ಒಳಗೆ ಇರುವ ಮನೆಯಲ್ಲಿ ನನ್ನ ದೊಡ್ಡಪ್ಪನಾದ ಓಬಳಪ್ಪನವರು ವಾಸ ಇದ್ದಾರೆ. ನನ್ನ ದೊಡ್ಡಪ್ಪನಿಗೆ ಇಬ್ಬರು ಗಂಡು ಮಕ್ಕಳು ಅವರೆಂದರೆ ನರಸಿಂಹಪ್ಪ ಮತ್ತು ಲೋಕೇಶ ಮತ್ತು ಐದು ಜನ ಹೆಣ್ಣು ಮಕ್ಕಳು. ಸದರಿ ನರಸಿಂಹಪ್ಪ ಮತ್ತು ಲೋಕೇಶ ಇಬ್ಬರು ಬೇರೆ ಬೇರೆ ವಾಸವಾಗಿಲ್ಲ, ಒಟ್ಟಾಗಿ ಇದ್ದಾರೆ.

ಈಗ ಸತ್ತಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ಒಂದೇ ಮನೆಯಲ್ಲಿ ವಾಸವಿದ್ದೀರ ಎಂದರೆ ಸಾಕ್ಷಿಯು ಈ ಕೇಸುವ ಹಾಕುವವರೆಗೂ ಒಟ್ಟಾಗಿ ಒಂದೇ ಮನೆಯಲ್ಲಿ ಇದ್ದೇವು, ಆನಂತರ ಬೇರೆ ಬೇರೆ ಇದ್ದೇವೆ. ಈ ಕೇಸು ಹಾಕುವ ಕಾಲಕ್ಕೆ ಸತ್ತಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಎರಡು ವಾಸದ ಮನೆ ಇತ್ತು. ಸದರಿ ಎರಡು ಮನೆಗಳು ನನ್ನ ದೊಡ್ಡಪ್ಪನಾದ ಓಬಳಪ್ಪ ಅಂದರೆ 1 ನೇ ಪ್ರತಿವಾದಿ ಹೆಸರಿನಲ್ಲಿತ್ತು. ಸತ್ತಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಸಂಬಂದಪಟ್ಟ ಎರಡು ಮನೆಗಳನ್ನು ಹೊರತು ಪಡಿಸಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಬೇರೆ ಯಾವುದೇ ಮನೆ ಇಲ್ಲ.

ಸಾಕ್ಷಿಗೆ 5 ಆಸ್ತಿ ತೆರಿಗೆ ದಾಖಲೆಗಳನ್ನು ತೋರಿಸಿ ಸದರಿ ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿ ಮತ್ತು ಅವರ ಮಗ ಲೋಕೇಶ್ ಹಾಗೂ ನನ್ನ ಅಜ್ಜ ಸತ್ತಪ್ಪನ ಹೆಸರಿನಲ್ಲಿ ಮನೆಗಳು ಇರುತ್ತವೆ ಎಂದು ಒಪ್ಪಿಕೊಂಡ ಮೇರೆಗೆ ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ 5 ಎಂದು ಗುರುತಿಸಲಾಯಿತು. ನಿಡಿ-1 ರಿಂದ 5 ರಲ್ಲಿರುವ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಈಗಾಗಲೇ ವಿಭಾಗವಾಗಿರುವ ಕಾರಣ ನಿಡಿ-1 ರಿಂದ 5 ರಲ್ಲಿರುವ ಮನೆಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಮೊಮ್ಮಗನ ಹೆಸರು ರವಿ. ಸದರಿ ರವಿ ತಮ್ಮ ಕುಟುಂಬದಲ್ಲಿ ವಿಭಾಗ ಪಡೆದು 10-15 ವರ್ಷಗಳಿಂದ ಬೇರೆ ಇದ್ದಾರೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬಕ್ಕೆ 35-40 ಎಕರೆ ಜಮೀನುಗಳು ಇವೆ. ಸದರಿ ಜಮೀನುಗಳು 1, 3 ಮತ್ತು 6 ನೇ ಪ್ರತಿವಾದಿಗಳ ಹೆಸರಿನಲ್ಲಿದೆ. ಅಲ್ಲದೇ ನನ್ನ ಹೆಸರಿನಲ್ಲಿಯು ಸಹ ಸ್ವಲ್ಪ ಜಮೀನು ಇದ್ದು, ಅದರ ಖಾತೆಯನ್ನು 1 ಮತ್ತು 3 ನೇ ಪ್ರತಿವಾದಿಗಳೇ ನನ್ನ ಹೆಸರಿಗೆ ಮಾಡಿಸಿದ್ದಾರೆ. ಸರ್ವೆ ನಂ.162, 163, 9/7 ರ ಜಮೀನುಗಳಲ್ಲಿ ತಲಾ 27 ಗುಂಟೆ ಜಮೀನನ್ನು ನನ್ನ ಹೆಸರಿಗೆ ಮಾಡಿಸಿದ್ದಾರೆ. ನನ್ನ ಹೆಸರಿಗೆ ಖಾತೆ ಯಾವ ಆಧಾರದ ಮೇಲೆ ಮಾಡಿಸಿದ್ದಾರೆಂದು ನಾನು ನೋಡಿಲ್ಲ. ಖಾತೆ ಬದಲಾವಣೆ ಮಾಡಿರುವ ವಿಚಾರ ನನಗೆ ಈ ಕೇಸು ಹಾಕುವ 2-3 ತಿಂಗಳುಗಳ ಮೊದಲು ಆಸ್ತಿ ವಿಭಾಗಕ್ಕಾಗಿ ಜಗಳ ಉಂಟಾಗಿದ್ದ ಸಮಯದಲ್ಲಿ ಗೊತ್ತಾಯಿತು. ಖಾತೆ ಬದಲಾವಣೆ ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿತ್ತು. 2013 ರಲ್ಲಿ ಬೀರೂರಿನ ವಿಜಯಾ ಬ್ಯಾಂಕಿಗೆ ನಾನು ಮತ್ತು ನನ್ನ ಅಣ್ಣ ಸರ್ವೆ ನಂ.163/ಪಿ2 ನ್ನು ಆಧಾರ ಮಾಡಿ ಸಾಲ ಪಡೆದಿದ್ದೇವೆ ಎಂದರೆ ನಿಜ, ಅದನ್ನು ಒಟ್ಟು ಕುಟುಂಬದಲ್ಲಿದ್ದಾಗ ಯಾವುದೋ ದಾಖಲೆಗೆ 1 ನೇ ಪ್ರತಿವಾದಿ ನನ್ನಿಂದ ಸಹಿ ಪಡೆದುಕೊಂಡು ಮಾಡಿಸಿದ್ದಾರೆ.

ಸರ್ವೆ ನಂ.162 ರ ಜಮೀನನ್ನು ವ್ಯವಸಾಯ ಸೇವಾ ಸಹಕಾರ ಸಂಘ ಮತ್ತು ಬೀರೂರಿನ ವಿಜಯಾ ಬ್ಯಾಂಕಿಗೆ ಆಧಾರ ಮಾಡಿ ನಾನು ಮತ್ತು ನನ್ನ ಅಣ್ಣ ಜಂಟಿಯಾಗಿ ಸಾಲ ಪಡೆದಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನಾವು ಒಟ್ಟು ಕುಟುಂಬದಲ್ಲಿದ್ದಾಗ ಪ್ರತಿವಾದಿಗಳು ನಮ್ಮ ಸಹಿ ಪಡೆದು ಮಾಡಿರುತ್ತಾರೆ. ವ್ಯವಸಾಯ ಸೇವಾ ಸಹಕಾರ ಸಂಘ ಮತ್ತು ಬೀರೂರಿನ ವಿಜಯಾ ಬ್ಯಾಂಕಿಗೆ ನಾನು ಹೋಗಿಲ್ಲ. ದಾವಾ ಐಟಂ ನಂ.6 ಮತ್ತು 7 ರ ಆಸ್ತಿಗಳು ಈಗ 6 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇದೆ. ಸರ್ವೆ ನಂ. 4/20 ಮತ್ತು 4/25 ರ ಜಮೀನುಗಳು 6 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ದಾವಾ ಐಟಂ ನಂ.6 ಮತ್ತು 7 ರ ಆಸ್ತಿಗಳು ಖಾತೆ 6 ನೇ ಪ್ರತಿವಾದಿ ಹೆಸರಿನಲ್ಲಿ ಇಲ್ಲದೆ ಇದ್ದರೂ ದುರುದ್ದೇಶದಿಂದ ಅವರನ್ನು ಕೇಸಿನಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

6 ನೇ ಪ್ರತಿವಾದಿ ಮೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ಸರ್ವೆ ನಂ.177 ರಲ್ಲಿ 1 ನೇ ಪ್ರತಿವಾದಿ ಹೆಸರಿಗೆ 1 ಎಕರೆ 18 ಗುಂಟೆ ಖಾತೆ ಬದಲಾವಣೆಯಾಗಿದೆ ಎಂದರೆ ನಿಜ. ಸರ್ವೆ ನಂ.9/4 ರ ಜಮೀನು ಮೊದಲು 3 ನೇ ಪ್ರತಿವಾದಿ ತಂದೆ ಹೆಸರಿನಲ್ಲಿದ್ದು ಆನಂತರ 3 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದು ಅದನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 9/7 ರಲ್ಲಿ ನನ್ನ ತಂದೆ, 1 ಮತ್ತು 3 ನೇ ಪ್ರತಿವಾದಿಗೆ ತಲಾ 27 ಗುಂಟೆ ಮತ್ತು 6 ನೇ ಪ್ರತಿವಾದಿಗೆ 26 ಗುಂಟೆ ಜಮೀನು ಬಂದಿತ್ತು ಎಂದರೆ ನಿಜ. ತದನಂತರ ನನ್ನ ತಂದೆ ಮರಣ ಹೊಂದಿದ ನಂತರ ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ 27 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಜಂಟಿಯಾಗಿ ಖಾತೆ ಬಂದಿದೆ ಎಂದರೆ ನಿಜ. ಸರ್ವೆ ನಂ. 162/1 ರಲ್ಲಿ 27 ಗುಂಟೆ ಮತ್ತು 163/ಪಿ2 ರಲ್ಲಿ 1 ಎಕರೆ 16 ಗುಂಟೆ ಮೊದಲು ನನ್ನ ತಂದೆ ಹೆಸರಿಗೆ ಖಾತೆ ಇದ್ದು ನಂತರ ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಖಾತೆ ಬಂದಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಇಷ್ಟದಂತೆ ಖಾತೆ ಮಾಡಿಸಿದ್ದಾರೆ. 1 ನೇ ಪ್ರತಿವಾದಿ 6 ನೇ ಪ್ರತಿವಾದಿ ವಿರುದ್ದ ಸರ್ವೆ ನಂ.20/7 ರಲ್ಲಿ 27 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಶಾಶ್ವತ ನಿರ್ಬಂದಕಾಜ್ಞೆಗಾಗಿ ಕೇಸನ್ನು ಹಾಕಿದ್ದಾರೆ ಎಂದರೆ ನಿಜ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.
ಕಡೂರು.